sdmimd

**Kannada Prabha**

Date: Friday, July 11, 2014 Page No.11

Edition: Mysore Language: Kannada

# ಜನರ ನಿರೀಕ್ಷೆ ತಲುಪದ ಬಜೆಟ್

## ಬಜೆಟ್ ಕುರಿತು ಏರ್ಪಡಿಸಿದ್ದ ಸಮಾವೇಶ, ಮುಕ್ತ ಸಂವಾದದಲ್ಲಿ ಸಿಐಐ ಅಧ್ಯಕ್ಷ ಆರ್.ಸಿ. ಜಗದೀಶ್



ಮೈಸೂರಿನ ಎಸ್‌ಡಿಎಂಐಎಂಡಿಯಲ್ಲಿ ಏರ್ಪಡಿಸಿದ್ದ ಕೇಂದ್ರ ಬಜೆಟ್‌ನ ಸಮಾವೇಶದಲ್ಲಿ ಸಿಐಐ ಮೈಸೂರು ಅಧ್ಯಕ್ಷ ಆರ್.ಸಿ.ಜಗದೀಶ್, ಆರ್ಥಿಕ ತಜ್ಞ ಪ್ರೊ.ವೆಂಕಟೇಶ್, ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್, ಡಿಎಚ್‌ಎಸ್ ಹಿರಿಯ ನಿರ್ದೇಶಕ ಸುಬ್ರಮಣಿಯನ್ ಕೃಷ್ಣಮಣಿ, ಕಾರ್ಯಕ್ರಮದ ಸಂಚಾಲಕ ಡಾ. ಉಲ್ಲಾಸ್‌ರಾವ್ ಭಾಗವಹಿಸಿದ್ದರು.

**ಕ.ಪ್ರ.ವಾರ್ತೆ | ಮೈಸೂರು | ಜು.10**

ಈ ಬಾರಿಯ ಕೇಂದ್ರ ಬಜೆಟ್ ಸಮಗ್ರವಾಗಿ ಜನರ ನಿರೀಕ್ಷೆ ತಲುಪುವಲ್ಲಿ ಯಶಸ್ವಿಯಾಗಿಲ್ಲ ಎಂದು ಭಾರತೀಯ ಕೈಗಾರಿಕಾ ಒಕ್ಕೂಟದ ಮೈಸೂರು ಅಧ್ಯಕ್ಷ ಆರ್.ಸಿ.ಜಗದೀಶ್ ಹೇಳಿದರು.

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ನಿರ್ವಹಣಾ ಅಭಿವೃದ್ಧಿ ಸಂಸ್ಥೆ ಹಾಗೂ ಭಾರತೀಯ ಕೈಗಾರಿಕಾ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಚಾಮುಂಡಿ ತಪ್ಪಲಿನಲ್ಲಿರುವ ಸಂಸ್ಥೆ ಸಭಾಂಗಣದಲ್ಲಿ ಗುರುವಾರ ಕೇಂದ್ರ ಬಜೆಟ್ ಕುರಿತು ಏರ್ಪಡಿಸಿದ್ದ ಸಮಾವೇಶ ಹಾಗೂ ಮುಕ್ತ ಸಂವಾದದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಣಕಾಸು ಸಚಿವ ಅರುಣ್ ಜೇಟ್ಲಿ ಮಂಡಿಸಿದ 2014ನೇ ಸಾಲಿನ ಬಜೆಟ್‌ನಲ್ಲಿ ಮೂಲ ಸೌಕರ್ಯ ಕಲ್ಪಿಸಲು ಹೆಚ್ಚು ಒತ್ತು ನೀಡಿರುವುದು ಸ್ವಾಗತಾರ್ಹ. ಆದರೆ ಈ ಬಾರಿಯ ಬಜೆಟ್ ಸಮಗ್ರವಾಗಿ ನಮ್ಮೆಲ್ಲರ ನಿರೀಕ್ಷೆ ಮುಟ್ಟಲಿಲ್ಲ ಎಂದು ಹೇಳಿದರು.

ಮೆಟ್ರೋ ಯೋಜನೆ, ಗ್ರಾಮೀಣಾಭಿವೃದ್ಧಿ, ವಿದ್ಯುತ್ ಯೋಜನೆ, ದೇಶದ ರಕ್ಷಣಾ ವಲಯದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಹೆಚ್ಚು ಆದ್ಯತೆ ನೀಡುವುದರ ಮೂಲಕ ಭಾರತದ ಆರ್ಥಿಕತೆಯಲ್ಲಿ ಶೇ.7 ರಿಂದ 8 ರಷ್ಟು ಅಭಿವೃದ್ಧಿ ಸಾಧಿಸುವ ಉದ್ದೇಶ ಸಮಂಜಸವಾಗಿದೆ ಎಂದರು.

**ಅಸಾಮಾಧಾನ:** ಸಂಸ್ಥೆ ನಿರ್ದೇಶಕ ಡಾ.ಎನ್.ಆರ್. ಪರಶುರಾಮನ್ ಮಾತನಾಡಿ, ಈ ಬಾರಿಯ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಇನ್ನೂ ಹೆಚ್ಚಿನ ಆದ್ಯತೆ ನೀಡಬಹುದಾಗಿತ್ತು. ದೇಶದಲ್ಲಿ ಕೇವಲ 5 ಐಐಟಿ ಹಾಗೂ ಐಐಎಂ ಕಾಲೇಜುಗಳ ಸ್ಥಾಪನೆಗೆ ಮುಂದಾಗಿರುವುದು ಅಸಮಾಧಾನ ತಂದಿದೆ. ಆದರೆ ಉದ್ಯೋಗ ಕೌಶಲ್ಯಾಭಿವೃದ್ಧಿಗೆ ಹಾಗೂ ಸಮಗ್ರ ಹಾಗೂ ಸುಸ್ಥಿರ ಆರ್ಥಿಕತೆಗೆ ಹೆಚ್ಚು ಒತ್ತು ನೀಡಿರುವುದು ಒಳ್ಳೆಯ ಸಂಗತಿ ಎಂದರು.

> ■ ಮೂಲ ಸೌಕರ್ಯ ಕಲ್ಪಿಸಲು ಹೆಚ್ಚು ಒತ್ತು ನೀಡಿರುವುದು ಸ್ವಾಗತಾರ್ಹ. ಆದರೆ ನಿರೀಕ್ಷೆ ಮುಟ್ಟಲಿಲ್ಲ

ಆರ್ಥಿಕ ತಜ್ಞ ಪ್ರೊ.ವೆಂಕಟೇಶ್ ಮಾತನಾಡಿ, ಯುವನಾಯಕತ್ವ, ಐಟಿ ಕಂಪೆನಿಗಳ ಅಭಿವೃದ್ಧಿಗೆ ₹500 ಕೋಟಿ ಸೇರಿದಂತೆ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚು ಮನ್ನಣೆ ನೀಡಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು.

ಸಾಮಾನ್ಯ ಜನರಿಗೆ ಒಳ್ಳೆಯ ದಿನಗಳು ಬರಲಿವೆಯೇ ಎಂಬ ಸಭಿಕರೊಬ್ಬರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಆರ್.ಸಿ.ಜಗದೀಶ್, ಈಗಾಗಲೇ ಏನನ್ನೂ ಊಹಿಸಲು ಸಾಧ್ಯವಿಲ್ಲ. 5-6 ತಿಂಗಳು ಕಾದು ನೋಡಬೇಕು. ಬಜೆಟ್‌ನಲ್ಲಿ ಘೋಷಿಸಿರುವ ಎಲ್ಲ ಯೋಜನೆಗಳನ್ನು ಸಂಪೂರ್ಣವಾಗಿ ಪ್ರಾಮಾಣಿಕವಾಗಿ ಪೂರ್ಣಗೊಳಿಸಲು ಪ್ರಯತ್ನಿಸಿದರೆ ಮಾತ್ರ ಶ್ರೀಸಾಮಾನ್ಯರಿಗೆ ಒಳ್ಳೆಯ ದಿನಗಳು ಬರಬಹುದು ಎಂದು ತಿಳಿಸಿದರು.

ನಂತರ ಡೆಲಾಯ್ಟ್ ಹಾಸ್ಕಿನ್ಸ್ ಆ್ಯಂಡ್ ಸೇಲ್ಸ್‌ನ ಹಿರಿಯ ನಿರ್ದೇಶಕ ಸುಬ್ರಮಣಿಯನ್ ಕೃಷ್ಣಮಣಿ ಅವರಿಂದ ಬಜೆಟ್ ವಿಶ್ಲೇಷಣೆ ನಡೆಯಿತು.